**ದಿನಾಂಕ:13-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:-**

ನನ್ನ ವಿದ್ಯಾಭ್ಯಾಸವನ್ನು ಅರಸೀಕೆರೆ ತಾಲ್ಲೂಕಿನ ಸಂಕಿಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹಾಗೂ ಜಾವಗಲ್ ನಲ್ಲಿ ಪ್ರೌಢಶಿಕ್ಷಣವನ್ನು ಮಾಡಿರುತ್ತೇನೆ. ನನ್ನ ತಂದೆ ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ ಮಲ್ಲದೇವರಹಳ್ಳಿಯವರು. ನಾನು 10 ನೇ ತರಗತಿಯ ನಂತರ 18 ವರ್ಷದವರೆಗೆ ನನ್ನ ತಂದೆಯ ಜೊತೆಯಲ್ಲಿ ಮಲ್ಲದೇವರಹಳ್ಳಿಯಲ್ಲಿ ಇದ್ದೆನು. ನನ್ನ ವಿವಾಹ 1981-82 ರಲ್ಲಿ ನಡೆದಿರುತ್ತದೆ. ನಿಡಿ-1 ರಲ್ಲಿ ನಮೂದಿಸಿರುವ ಶ್ರೀಮತಿ ರತ್ನಮ್ಮ ಕೋಂ ದಿವಾಕರ ಎಂಬುದು ತಪ್ಪಾಗಿದೆ. ನಾನು ದಾವೆಯನ್ನು ಸಲ್ಲಿಸುವ ಕಾಲಕ್ಕೆ ನನ್ನ ಪತಿಯ ಹೆಸರನ್ನು ನೀಡಿರಲಿಲ್ಲ. ಟಿ.ಡಿ.ಕಿರಣ್ ಎಂಬುವವರು ದಿವಾಕರರವರ ಮಗ. ನಾನು ನಿಡಿ-1 ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಿವಾಕರ ನನ್ನ ಪತಿ ಎಂದು ನಾನು ಮಾಹಿತಿ ನೀಡಿಲ್ಲ. ಅಸಲು ದಾವಾ 450/2000 ಸಲ್ಲಿಸುವ ಕಾಲಕ್ಕೆ ನಾನು ನನ್ನ ವಯಸ್ಸನ್ನು ನೀಡಿಲ್ಲ. 1977 ರಿಂದ ನಾನು ದಾವಾಸ್ವತ್ತಿನ ಸ್ವಾಧೀನತೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ. 1977 ರ ಕಾಲಕ್ಕೆ ನಾನು ವಿವಾಹವಾಗಿರಲಿಲ್ಲ ಎಂದರೆ ಸರಿಯಲ್ಲ. ಕುರಿದೊಡ್ಡಿ ಗ್ರಾಮ ಸಖರಾಯಪಟ್ಟಣ ಹೋಬಳಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ.

ಹಳೆ ಸ.ನಂ.784 ಹಾಗೂ ಹೊಸ ಸ.ನಂ.149 ಕ್ಕೆ ನಾನು ಯಾವುದೇ ಅರ್ಜಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿ ಇಲಾಖೆಯವರು ಹಳೆ ಸ.ನಂ.784 ಹಾಗೂ ಹೊಸ ಸ.ನಂ.149 ರಲ್ಲಿ ವಾದಿ ಇಲಾಖೆಗೆ ಮಂಜೂರಾದ ದಿನಾಂಕದಿಂದ 100 ಎಕರೆ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದು ನಾನು ದಾವಾಸ್ವತ್ತನ್ನು ಅತಿಕ್ರಮಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರದೀಪಕುಮಾರ್ ಎಂಬುವವರು ನನಗೆ ಗೊತ್ತಿಲ್ಲ. ಪ್ರದೀಪಕುಮಾರ್ ರವರಿಂದ ವಾದಿ ಇಲಾಖೆಯವರು ಸ್ವಾಧೀನತೆಯನ್ನು ಪಡೆದು ಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-21 ಛಾಯಾಚಿತ್ರದಲ್ಲಿ ನನಗೆ ಸೇರಿದ ಸ್ವತ್ತಿನಿಂದ ಆಚೆಗೆ ವಾದಿ ಇಲಾಖೆಯವರು ಇದ್ದಾರೆ. ನಾನು ಸ್ವಾಧೀನದಲ್ಲಿರುವ ಪೂರ್ವಕ್ಕೆ ವಾದಿ ಇಲಾಖೆಯವರು ಇದ್ದಾರೆ, ಸಾಕ್ಷಿ ಮುಂದುವರೆದು ಟ್ರಂಚನ್ನು ಒಡೆದು ಬೇಲಿ ಹಾಕಿಕೊಂಡಿದ್ದಾರೆ ಎಂದು ಹೇಳುತ್ತಾರೆ. ರಸ್ತೆಯ ಕಡೆಗೆ ಅವರಿಗೆ ಸೇರಿದ ಸ್ವತ್ತಿಗೆ ಸಂಬಂಧಿಸಿದಂತೆ ತಂತಿಬೇಲಿ ಹಾಕಿಕೊಂಡಿದ್ದಾರೆ.

ನಿಡಿ-21 ರಲ್ಲಿ ಕಾಣುವ ರಸ್ತೆ ಎಮ್ಮೆದೊಡ್ಡಿ-ಕಲ್ಲಹಳ್ಳಿಗೆ ಹೋಗುವ ರಸ್ತೆ. ನನ್ನ ಮಗನ ಹೆಸರು ಸಂತೋಷ್ ಕುಮಾರ್. ಪ್ರದೀಪ್ ಕುಮಾರ್ ಬಿನ್ ಗಣೇಶಪ್ಪರವರು ದಾವೆ ಸಲ್ಲಿಸಿರುವ ಕುರಿತು ನನಗೆ ಗೊತ್ತಿಲ್ಲ. ಸದರಿ ಪ್ರದೀಪ್‌ಕುಮಾರ್ ರವರು ಅಕ್ರಮವಾಗಿ ಸ್ವಾಧೀನತೆಯನ್ನು ಹೊಂದಿದ್ದ ಕುರಿತು ನನಗೆ ಗೊತ್ತಿಲ್ಲ. ಸದರಿ ಪ್ರದೀಪ್ ಕುಮಾರ್ ರವರು ಸಲ್ಲಿಸಿದ್ದ ದಾವೆ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರದಲ್ಲಿ ವಾದಿ

ಇಲಾಖೆಯವರು ಪ್ರದೀಪ್ ಕುಮಾರ್ ರವರಿಂದ ಸ್ವಾಧೀನತೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಇಲಾಖೆಗೆ ಮಂಜೂರಾದ 100 ಎಕರೆ ಜಮೀನಿನಲ್ಲಿ ನಾನು ಇಲ್ಲ, ನನಗೆ ಸೇರಿದ 4 ಎಕರೆ ಜಮೀನಿನಲ್ಲಿ ನಾನು ಇದ್ದೇನೆ. ಅಳತೆ ಮಾಡಿಸಿದಾಗ ನಾನು ಇರುವ 4 ಎಕರೆ ವಾದಿ ಇಲಾಖೆಗೆ ಸೇರಿದೆ ಎಂದು ಕಂಡು ಬಂದಲ್ಲಿ ಸದರಿ ಜಮೀನನ್ನು ಬಿಟ್ಟುಕೊಡುತ್ತೀರಾ ಎಂದರೆ ಸಾಕ್ಷಿ ಅದು ನನಗೆ ಸೇರಿದ ಜಮೀನಾಗಿದ್ದು, ಸದರಿ ಜಮೀನನ್ನು ಬಿಡುವುದಿಲ್ಲ ಎಂದು ಹೇಳುತ್ತಾರೆ.

ವಾದಿ ಇಲಾಖೆಗೆ 69 ಎಕರೆ ಮಾತ್ರ ಮಂಜೂರಾಗಿದ್ದು ಸದರಿ ಜಮೀನಿನಲ್ಲಿ ವಾದಿ ಇಲಾಖೆಯವರು ಇದ್ದಾರೆ. ನಿಡಿ-5 ನಕ್ಷೆಯನ್ನು ವಾದಿ ಇಲಾಖೆಯವರೇ ಮಾಡಿಸಿರುತ್ತಾರೆ. ನಿಡಿ-5 ರಲ್ಲಿ ವಾದಿ ಇಲಾಖೆಯವರು ಅಳತೆ ಮಾಡಿಸಿರುವ ಕುರಿತು ನಮೂದು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-5 ರಲ್ಲಿ ವಾದಿ ಇಲಾಖೆಯವರು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನಮೂದು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಪಹಣಿಗಳು ಕೈಬರಹದ ಪಹಣಿಗಳು ಎಂದರೆ ಸರಿ. ಈಗ ಗಣಕೀಕೃತ ಪಹಣಿಗಳು ಇವೆ, ಆದರೆ ನಾನು ದಾವೆಯನ್ನು ಸಲ್ಲಿಸುವ ಕಾಲಕ್ಕೆ ಕೈಬರಹದ ಪಹಣಿಗಳು ಇದ್ದವು.

ನಾನು ಹಾಜರುಪಡಿಸಿರುವ ದಾಖಲೆಗಳು ಶಿಫಾರಸ್ಸು ಮಾಡಿ ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ನಾನು ನನ್ನ ಪತಿಯ ಕುಟುಂಬಕ್ಕೆ ಸೇರಿದ ಸ್ವತ್ತುಗಳ ಕುರಿತು ಹಿಸ್ಸೆ ಕೋರಿ ದಾವೆಯನ್ನು ಸಲ್ಲಿಸಿದ್ದೇನೆ. ಅದರಲ್ಲಿ ನನಗೆ 4 ಗುಂಟೆ ಹಿಸ್ಸೆ ಬರುತ್ತದೆ. ಸದರಿ ದಾವೆಯ ಕುರಿತು ಡಿಕ್ರಿಯಾಗಿದ್ದು, ಅಂತಿಮ ಡಿಕ್ರಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ದಾವಾಸ್ವತ್ತಿನಲ್ಲಿ 30 ವರ್ಷಗಳಿಂದ ಸ್ವಾಧೀನತೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಪ್ರಕಾರ ಪ್ರದೀಪ್ ಕುಮಾರ್ ಸಿ.ಡಿ.ಕಿರಣ ಸ್ವಾಧೀನತೆಯಲ್ಲಿ ಇರುವ ಕುರಿತು ನನಗೆ ಗೊತ್ತಿಲ್ಲ. ಸ.ನಂ.149 ರಲ್ಲಿ ವಾದಿ ಇಲಾಖೆಗೆ ಸೇರಿದ 100 ಎಕರೆ ಪೈಕಿ 4 ಎಕರೆಯಲ್ಲಿ ಅತಿಕ್ರಮವಾಗಿ ಸ್ವಾಧೀನದಲ್ಲಿ ಇದ್ದೀರಾ ಎಂದರೆ ಸಾಕ್ಷಿ ನನ್ನ ಪಾಡಿಗೆ ನಾನು ಇದ್ದೇನೆ ಎಂದು ಹೇಳುತ್ತಾರೆ. ವಾದಿ ಇಲಾಖೆಗೆ ಸೇರಿದ 100 ಎಕರೆ ಪೈಕಿ ನಾನು ಮಾತ್ರ 4 ಎಕರೆಯಲ್ಲಿ ಅತಿಕ್ರಮವಾಗಿ ಇದ್ದೇನೆ ಎಂದರೆ ಸಾಕ್ಷಿ ವಾದಿ ಇಲಾಖೆಗೆ 69 ಎಕರೆ ಮಾತ್ರ ಇದ್ದು, ನನಗೆ ಸೇರಿದ 4 ಎಕರೆಯಲ್ಲಿ ನಾನು ಇದ್ದೇನೆ ಎಂದು ಹೇಳುತ್ತಾರೆ. ನಾನು 1971-72 ರಿಂದ ದಾವಾಸ್ವತ್ತಿನ ಸ್ವಾಧೀನತೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ.

ನಾನು ಬಗರ್ ಹುಕುಂ ಸಮಿತಿಗೆ ನೀಡಿದ ಅರ್ಜಿ ವಜಾಗೊಂಡಿದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಬಾಕಿ ಇರುವ ಕುರಿತು ನ್ಯಾಯಾಲಯಕ್ಕೆ ದಾಖಲಾತಿಯನ್ನು ನೀಡಿದ್ದೇನೆ. ನಾನು 1981-82 ರಿಂದ ಸ್ವಾಧೀನತೆಯಲ್ಲಿ ಇಲ್ಲ ಎಂದು ನಿಡಿ-23 ರಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನತೆಯಲ್ಲಿ ಇದ್ದು, ತೆಂಗು ಮತ್ತು ಅಡಿಕೆ ಬೆಳೆದಿದ್ದೇನೆ ಎಂದು ಹೇಳುತ್ತಾರೆ. ಅಸಲು ದಾವಾ ಸಂಖ್ಯೆ:456/2000 ರ ತೀರ್ಪಿನಂತೆ ನನ್ನನ್ನು

ಕಾನೂನುಬದ್ದವಾಗಿ ಸ್ವಾಧೀನತೆಯಿಂದ ತೆರವುಗೊಳಿಸಬೇಕು ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಹಲವು ಬಾರಿ ವಾದಿ ಇಲಾಖೆಯವರು ಸ್ವಾಧೀನತೆಯನ್ನು ತೆರವುಗೊಳಿಸಬೇಕು ಎಂದು ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ವಾಸ್ತವಾಂಶವನ್ನು ಮರೆಮಾಚಿ ಸುಳ್ಳು ಮಾಹಿತಿಯನ್ನು ನೀಡಿ ಪ್ರತಿವಾದಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ದಾಖಲಾತಿಗಳು ಇಲ್ಲದಿದ್ದರೂ ವಾದಿಗೆ ಸೇರಿದ ಸ್ವತ್ತಿನಲ್ಲಿ ಸ್ವಾಧೀನತೆಯಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
ಪ್ರಃ1 ನೇಃಹಿಃ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.